**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS- 233/2003** **DW-2**

**ದಿಃ 01.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ಪರ ಶ್ರೀ ಸಿ ಸಿ ಆರ್ ವಕೀಲರಿಂದಃ**

1. ತಾವು ಪ್ರಾಥಮಿಕವಾಗಿ ಯಾವದೇ ಕೈಪಿಯತ್ತನ್ನು ಹಾಕಿರಲಿಲ್ಲ ಎಂದರೆ ಸಾಕ್ಷಿಯು ಅಳವಡಿಸಿಕೊಂಡಿರುತ್ತೇವೆಂದು ನುಡಿಯುತ್ತಾರೆ. 10 ರಿಂದ 12 ನೇ ಪ್ರತಿವಾದಿಯರ ಕೈಪಿಯತ್ತನ್ನು ಅಳವಡಿಸಿಕೊಂಡಿರುತ್ತೇವೆ. ನನಗೆ 10 ರಿಂದ 12 ನೇ ಪ್ರತಿವಾದಿಯರು ಸಾಕ್ಷಿ ನುಡಿಯಲು ಯಾವದೇ ಮೊಕ್ತಿಯಾರ ಪತ್ರವನ್ನು ಕೊಟ್ಟಿರುವದಿಲ್ಲ. ಹೆಚ್ಚುವರಿ ಕೈಪಿಯತ್ತನ್ನು ನಾನು ದಾಖಲಿಸಿರುತ್ತೇನೆ. ತಾವು ಹೆಚ್ಚುವರಿ ಕೈಪಿಯತ್ತನ್ನು ತಮ್ಮ ಪತ್ನಿಯ ಜಿಪಿಎ ದಾರರಾಗಿ ಸಲ್ಲಿಸಿ ಅದರಲ್ಲಿ ದಾವೆಯು 10 ರಿಂದ 13 ನೇ ಪ್ರತಿವಾದಿಯರ ವಿರುದ್ದ ಊರ್ಜಿತವಾಗುವದಿಲ್ಲ ಎಂದು ಪರಿಹಾರವನ್ನು ಕೋರಿರುತ್ತೀರಿ ಎಂದರೆ ಸರಿ. ನಾನು 10 ರಿಂದ 12 ನೇ ಪ್ರತಿವಾದಿಯರ ವಿರುದ್ದ ಯಾವದೇ ಪರಿಹಾರವನ್ನು ಕೋರಿರುವದಿಲ್ಲ ಬದಲಿಗೆ ಕೈಪಿಯತ್ತನಲ್ಲಿ ಬಂದಿರುವ ಕಾರಣ ಅದನ್ನು ಉಲ್ಲೇಖಿಸಿರುತ್ತೇನೆ. 10 ರಿಂದ 12 ನೇ ಪ್ರತಿವಾದಿಯರ ಕೈಪಿಯತ್ತನಲ್ಲಿಯೇ ದೋಷದಿಂದ ಕೂಡಿರಬಹುದು. 10 ರಿಂದ 12 ನೇ ಪ್ರತಿವಾದಿಯರು ಸಂಪೂರ್ಣ ದಾವಾ ಆಸ್ತಿಗೆ ಸಂಬಂದಿಸಿದಂತೆ ಕೈಪಿಯತ್ತನ್ನು ಹಾಕಿದ್ದರು.

2. ನನಗೂ ಮತ್ತು 10 ರಿಂದ 12 ನೇ ಪ್ರತಿವಾದಿಯರಿಗೂ ಯಾವದೇ ರೀತಿಯ ಸಂಬಂದ ಇರುವದಿಲ್ಲ. ಆದರೆ ಪರಿಚಯಸ್ದರು. 10 ರಿಂದ 12 ನೇ ಪ್ರತಿವಾದಿಯರು ಹಾಕಿದ ಕೈಪಿಯತ್ತನಲ್ಲಿ ಉಲ್ಲೇಖಿಸಿರುವ ಅಂಶಗಳು ನನಗೆ ಬಂಧನಕಾರಿಯಾಗಿರುವದಿಲ್ಲ. ಸಾಕ್ಷಿ ಮುಂದುವರೆದು ನಾವು ಹೆಚ್ಚುವರಿ ಕೈಪಿಯತ್ತನ್ನು ಹಾಕಿರುತ್ತೇವೆಂದು ನುಡಿಯುತ್ತಾರೆ. ಹೆಚ್ಚುವರಿ ಕೈಪಿಯತ್ತನ್ನು ಹಾಕಬೇಕಾದಲ್ಲಿ ತಮ್ಮ ಮೂಲ ಕೈಪಿಯತ್ತ ಇರುವದಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಈ ವಿಚಾರ ನನ್ನ ಹೆಂಡತಿಗೆ ಗೊತ್ತಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ತಮ್ಮ ಹೆಂಡತಿಯೇ 10 ರಿಂದ 12 ನೇ ಪ್ರತಿವಾದಿಯರ

ಕೈಪಿಯತ್ತನ್ನು ಅವರ ಪರವಾಗಿ ಅಳವಡಿಸಿಕೊಂಡಿರುತ್ತಾರೆಂದರೆ ಸರಿ. ನಾನೇ ನನ್ನ ವಕೀಲರಿಗೆ ಹೆಚ್ಚುವರಿ ಕೈಪಿಯತ್ತನ್ನು ಹಾಕಲು ಮಾಹಿತಿಯನ್ನು ಕೊಟ್ಟಿದ್ದು ಈ ರೀತಿ ಕೊಡುವಾಗ ಅವರಿಗೆ ಉತಾರ , ಕರ ತುಂಬಿದ ಪಾವತಿಗಳು , ಎನ್ ಎ ಆರ್ಡರ ಮತ್ತು ಕ್ರಯ ಪತ್ರಗಳನ್ನು ಹಾಗೂ ಪ್ಲಾಟಿನ ನಕಾಶೆ ಮತ್ತು ಯೋಜನೆಯನ್ನು ಮತ್ತು ನೊಟಿಪಿಕೇಶನ ರಜಿಸ್ಟರನ್ನು ಕೊಟ್ಟಿರುತ್ತೇನೆ. 10 ರಿಂದ 12 ನೇ ಪ್ರತಿವಾದಿಯರು ಸಲ್ಲಿಸಿದ ಕೈಪಿಯತ್ತನ ಜೊತೆಗೆ ನನ್ನ ಹೆಚ್ಚುವರಿ ಕೈಪಿಯತ್ತ ಇರುತ್ತದೆ. ಯಾವ ಕಾರಣಕ್ಕಾಗಿ 20 ವರ್ಷಗಳ ನಂತರ ಹೆಚ್ಚುವರಿ ಕೈಪಿಯತ್ತನ್ನು ತಡವಾಗಿ ಹಾಕಲಾಗಿರುತ್ತದೆ ಎಂದರೆ ಸಾಕ್ಷಿಯು ಗೌ. ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ಇತ್ತೀಚೆಗೆ ನಮ್ಮ ಸಾಕ್ಷಿ ಬಂದ ಕಾರಣ ತಡವಾಗಿ ಸಲ್ಲಿಸಲಾಗಿರುತ್ತದೆ. ವಾದಿಯು ಅಸಲರ್ಜಿಯನ್ನು ತಿದ್ದಪಡಿ ಮಾಡಿಕೊಂಡ ಕಾರಣ ಹೆಚ್ಚುವರಿ ಕೈಪಿಯತ್ತನ್ನು ಹಾಕುವ ಸಂದರ್ಬ ಬಂದಿರುತ್ತದೆಂದು ನುಡಿಯುತ್ತಾರೆ.

3. ಕ್ರಯ ಪತ್ರ ಆಗುವ ಸುಮಾರು 30 ರಿಂದ 35 ಹಿಂದೆ ಮಾತುಕತೆ ಪ್ರಾರಂಬವಾಗಿರುತ್ತದೆ. ಕ್ರಯ ಪತ್ರ ಆಗುವ ಪೂರ್ವದಲ್ಲಿ ಮೌಖಿಕ ಕರಾರು ಆಗಿದ್ದು ನಂತರ ಕ್ರಯ ಪತ್ರ ಆಗಿರುತ್ತದೆ. ಆಸ್ತಿಯ ಮಾಲೀಕರ ಜೆಪಿಎ ದಾರರಾದ ಶ್ರೀ ಸಿ ವಿ ಆರ್ ವಕೀಲರ ರವರ ಜೊತೆ ಮೌಖಿಕ ಕರಾರಿನ ಮಾತುಕತೆ ಆಗಿತ್ತು. ನಾನು ಮೂಲ ಮಾಲೀಕರನ್ನು ಆಸ್ತಿ ಖರೀದಿಸುವ ಪೂರ್ವದಲ್ಲಿ ಬೇಟಿ ಮಾಡಿರುವದಿಲ್ಲ. ಸಾಕ್ಷಿ ಮುಂದುವರೆದು ಜಿಪಿಎ ಪತ್ರವು ನೋಂದಾಯಿತ ಪತ್ರ ಆಗಿದ್ದ ಕಾರಣ ಬೇಟಿ ಮಾಡಲು ಹೋಗಿಲ್ಲ ಎನ್ನುತ್ತಾರೆ. ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುವದಿಲ್ಲ. ಮಾತುಕತೆಯನ್ನು ನನ್ನ ಹೆಂಡತಿಯು ಮಾಡಿದ್ದು ಅವರ ಜೊತೆ ನಾನೂ ಸಹ ಇದ್ದೆ. ನಾವು ಖರೀದಿ ಪತ್ರದಲ್ಲಿ 1,75,000/- ರೂ ಗಳನ್ನು ಖರೀದಿ ಕರಾರು ಪತ್ರದಲ್ಲಿ ನೀಡಿರುತ್ತೇವೆಂದು ಉಲ್ಲೇಖಿಸಿದ್ದು ಯಾವ ಪತ್ರ ಎಂದು ಕೇಳಲಾಗಿ ಸಾಕ್ಷಿಯು ಅ ರೀತಿ ಪತ್ರ ಆಗಿಲ್ಲ ಕೇವಲ ಮೌಖಿಕ ಕರಾರು ಆಗಿತ್ತು ಎಂದು ನುಡಿಯುತ್ತಾರೆ. ಆ ಒಂದು ಲಕ್ಷ ಎಪ್ಪತ್ತೈದು ಸಾವಿರ ರೂ ಗಳನ್ನು ಜಿಪಿಎ ದಾರರಾದ ಶ್ರೀ ಸಿ ವಿ ರಟ್ಟಿಹಳ್ಳಿ ವಕೀಲರವರಿಗೇ ನೀಡಲಾಗಿರುತ್ತದೆ. ಈ ರೀತಿ ಉಲ್ಲೇಖವು ಕ್ರಯ ಪತ್ರದಲ್ಲಿ ಇಲ್ಲ ಎಂದರೆ ಸಾಕ್ಷಿಯು ಯಾರು ಬರೆದುಕೊಟ್ಟರೋ ಅವರಿಗೆ ಮುಟ್ಟಿರುತ್ತದೆಂದು ನುಡಿಯುತ್ತಾರೆ. ನಿರ್ದಿಷ್ಟವಾಗಿ ಯಾರಿಗೆ ಹಣನೀಡಲಾಗಿದೆ ಎಂದು ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಜಿಪಿಎ ದಾರರೇ ಬರೆದುಕೊಟ್ಟಿದ್ದು ಅವರಿಗೆ

ಮುಟ್ಟಿರುತ್ತದೆಂದು ಉಲ್ಲೇಖ ಇದೆ ಎಂದು ನುಡಿಯುತ್ತಾರೆ. ನನ್ನ ಬಳಿ ಮೂಲ ಜಿಪಿಎ ಪತ್ರ ಇಲ್ಲ ಅದನ್ನು ತರಿಸುವಂತೆ ನ್ಯಾಯಾಲಯಕ್ಕೆ ಅರ್ಜಿಯನ್ನು ಕೊಟ್ಟಿರುತ್ತೇನೆ. ತಾವು ಉಪನೋಂದಣಾದಿಕಾರಿಗಳ ಕಚೇರಿಯಲ್ಲಿ ಜಿಪಿಎ ಪತ್ರವನ್ನು ಒದಗಿಸುವಂತೆ ಕೊವಾೀರಿ ಅರ್ಜಿಯನ್ನು ಜಿಪಿಎ ಏನಾದರೂ ಹಾಕಿರುತ್ತೀರಾ ಎಂದರೆ ಸಾಕ್ಷಿಯು ನಾನು ಸದರಿ ಕಚೇರಿಗೆ ಬೇಟಿ ಕೊಟ್ಟು ದಾಖಲೆಯನ್ನು ಒದಗಿಸುವಂತೆ ಕೇಳಿದ್ದು ಅವರು ಜಿಪಿಎ ಬರೆದುಕೊಟ್ಟವರು ಮತ್ತು ಬರೆಸಿಕೊಂಡವರಿಗೆ ಮಾತ್ರ ನೀಡಲಾಗುತ್ತದೆ ಬೇರೆಯವರಿಗೆ ನೀಡಲಾಗುವದಿಲ್ಲ ಎಂದು ಮೌಖಿಕವಾಗಿ ತಿಳಿಸಿದ ಕಾರಣ ಅರ್ಜಿಯನ್ನು ಹಾಕಿಲ್ಲ ಎನ್ನುತ್ತಾರೆ. ನಾನು ಅರ್ಜಿಯನ್ನು ಕೊಡಲು ಹೋಗಿದ್ದು ಅದನ್ನು ಕಚೇರಿಯವರು ನೋಡಿ ಮಾಹಿತಿಯನ್ನು ನೀಡಲು ಆಗುವದಿಲ್ಲ ಎಂದು ಹೇಳಿದ ಕಾರಣ ಅರ್ಜಿಯನ್ನು ವಾಪಸು ಪಡೆದಿರುತ್ತೇನೆ. ಅರ್ಜಿಯನ್ನು ಕಚೇರಿಯವರು ಸ್ವೀಕರಿಸಿರುವದಿಲ್ಲ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಅಲ್ಲಿರುವ ಸಿಬ್ಬಂದಿಗೆ ಅಥವಾ ಸಂಬಂದಪಟ್ಟ ಸಿಬ್ಬಂದಿ ಬಳಿ ಕೇಳಿರುತ್ತೇವೆ. ಯಾವ ಯಾವ ಸಮಯದಲ್ಲಿ 1,75,000/- ರೂ ಗಳನ್ನು ಕೊಟ್ಟಿರುತ್ತೇನೆಂದು ಕ್ರಯ ಪತ್ರದಲ್ಲಿ ಬರೆಸಿಲ್ಲ ಆದರೆ ಕೊಟ್ಟಿರುತ್ತೇನೆಂದು ಮಾತ್ರ ಉಲ್ಲೇಖಿಸಲಾಗಿದೆ. ಕ್ರಯ ಪತ್ರದಲ್ಲಿ ಒಂದು ರೂಪಾಯಿಗಳು ಸಹ ಚೆಕ್ಕ ಮುಖಾಂತರ ವರ್ಗಾವಣೆಯಾಗಿಲ್ಲ ಎಂದರೆ ಸಾಕ್ಷಿಯು ನಗದು ರೂಪದಲ್ಲಿ ನೀಡಲಾಗಿರುತ್ತದೆಂದು ನುಡಿಯುತ್ತಾರೆ.

4. ನನ್ನ ಹೆಂಡತಿಯು ಈಗ ಆಸ್ತಿ ತೆರಿಗೆ ಪಾವತಿದಾರರಾಗಿರುತ್ತಾರೆ. ಸುಮಾರು 10-12 ವರ್ಷಗಳಿಂದ ತೆರಿಗೆ ಪಾವತಿದಾರರು ಆಗಿರುತ್ತಾರೆ. ನನ್ನ ಹೆಂಡತಿಯು ವ್ಯವಸಾಯ ಮತ್ತು ಮನೆ ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ತಮ್ಮ ಹೆಂಡತಿಗೆ ಎರಡು ಕ್ರಯ ಪತ್ರದಲ್ಲಿ ತಿಳಿಸಿರುವ ಒಟ್ಟು ಮೊತ್ತ ರೂ.6,05,000/- ಗಳು ಎಲ್ಲಿಂದ ಬಂದಿರುತ್ತದೆಂದರೇ ಸಾಕ್ಷಿಯು ವ್ಯವಸಾಯದ ಮೂಲದಿಂದ ಬಂದಿರುತ್ತದೆಂದು ನುಡಿಯುತ್ತಾರೆ. 1999 ರಿಂದ 2001 ರವರೆಗೂ ತಮ್ಮ ಹೆಂಡತಿ ಹೆಸರಿನಲ್ಲಿ ಎಷ್ಟು ಎಕರೆ ವ್ಯವಸಾಯದ ಜಮೀನು ಇತ್ತು ಎಂದರೆ ಸಾಕ್ಷಿಯು ಸುಮಾರು 30 ರಿಂದ 35 ಎಕರೆ ಜಮೀನು ಇತ್ತು ಎಂದು ನುಡಿಯುತ್ತಾರೆ. ಈ ರೀತಿ ತೋರಿಸಲು ಯಾವದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅದನ್ನು ಈಗಲೂ ಹಾಜರುಪಡಿಸಲು ಯಾವದೇ ತೊಂದರೆ ಇರುವದಿಲ್ಲ. ಆ ಸಮಯದಲ್ಲಿ ತಮ್ಮ ಹೆಂಡತಿಗೆ ಆದಾಯ ಇತ್ತು ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿರುತ್ತೀರಿ ಎಂದರೆ

ಸಾಕ್ಷಿಯು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ. 1999 ರಿಂದ 2001 ರಲ್ಲಿ ತಮ್ಮ ಹೆಂಡತಿಗೆ ವಾರ್ಷಿಕ ಆದಾಯ ಎಷ್ಟು ಇತ್ತು ಎಂದರೆ ಸಾಕ್ಷಿಯ ವರ್ಷಕ್ಕೆ 60 ರಿಂದ 70 ಸಾವಿರ ರೂ ಇದ್ದು ಮದುವೆ ನಂತರ ನಮ್ಮ ಜಮೀನು ಸಹ ಬಂದಿರುವದರಿಂದ ಇನ್ನೂ ಹೆಚ್ಚಿನ ಆದಾಯ ಇರುತ್ತದೆಂದು ನುಡಿಯುತ್ತಾರೆ. ನನ್ನ ವಿವಾಹವು 1985 ರಲ್ಲಿ ಆಗಿರುತ್ತದೆ. ನಾನು ನನ್ನ ಹೆಂಡತಿಗೆ ಆಸ್ತಿಯನ್ನು ಖರೀದಿ ಮಾಡುವಾಗ ಆರ್ಥಿಕ ಸಹಾಯವನ್ನು ಮಾಡಿರಬಹುದು. ಈ ರೀತಿ ಕೊಟ್ಟಿದ್ದರೆ ನನ್ನ ಐ ಟಿ ರಿಟರ್ನ್ಸ್‌ನಲ್ಲಿ ಉಲ್ಲೇಖ ಇರಬಹುದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಕ್ರಯ ಪತ್ರದಲ್ಲಿ ಯಾರು ಹಣವನ್ನು ಕೊಟ್ಟಸಿರುತ್ತಾರೆಂದು ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿಯು ಖರೀದಿದಾರರು ಹಣವನ್ನು ಕೊಟ್ಟಿರುತ್ತಾರೆಂಬ ಅರ್ಥ ಕ್ರಯ ಪತ್ರವನ್ನು ಓದಿದಾಗ ತಿಳಿಯುತ್ತದೆಂದು ನುಡಿಯುತ್ತಾರೆ. ಖರೀದಿದಾರರ ಜೊತೆ ತಾವು ಎನಾದರೂ ಹಣವನ್ನು ಕೊಟ್ಟ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಸಾಕ್ಷಿಯು ಖರೀದಿದಾರರು ಮಾತ್ರ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. 1 ರಿಂದ 9 ನೇ ಪ್ರತಿವಾದಿಯರ ಜಮೀನು ವ್ಯವಸಾಯ ಜಮೀನು ಆಗಿತ್ತು ಎಂದರೆ ಸರಿ. ವ್ಯವಸಾಯ ಜಮೀನನ್ನು ಖರೀದಿ ಮಾಡಬೇಕಾದರೆ ಉಪವಿಭಾಗಾದಿಕಾರಿಗಳ ಮತ್ತು ಜಿಲ್ಲಾದಿಕಾರಿಗಳ ಪರವಾನಿಗೆ ಬೇಕಾಗುತ್ತದೆಂದರೆ ಸಾಕ್ಷಿಯು ನನ್ನ ಹೆಂಡತಿ ವ್ಯವಸಾಯಗಾರರಾಗಿದ್ದ ಕಾರಣ ಪರವಾನಿಗೆ ಅಗತ್ಯವಿಲ್ಲ ಎಂದು ನುಡಿಯುತ್ತಾರೆ. 1999 – 2001 ರಲ್ಲಿ ವಾರ್ಷಿಕ ಆದಾಯವು 2 ಲಕ್ಷಕ್ಕಿಂತ ಕಡಿಮೆ ಇದ್ದವರ ವ್ಯವಸಾಯಗಾರರಿಗೆ ಮಾತ್ರ ಆಸ್ತಿ ಖರೀದಿಸಲು ಪರವಾನಿಗೆ ಇತ್ತು ಎಂದರೆ ಸಾಕ್ಷಿಯು ಈ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

5. ಇ-ಖಾತಾದಲ್ಲಿ 5 ಪ್ಲಾಟನ ಚಕಬಂದಿ ಏನು ಇರುತ್ತದೆಂದು ನೋಡದೇ ಹೇಳಲು ಬರುವದಿಲ್ಲ. ನಿಡಿ 26 ರಲ್ಲಿ ಮತ್ತು ನಿಡಿ 18 ರಿಂದ 22 ರಲ್ಲಿರುವ ಕ್ಷೇತ್ರದ ವಿಸ್ತೀರ್ಣದಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೇಳಬೇಕು ಎನ್ನುತ್ತಾರೆ. ಸಾಕ್ಷಿಗೆ ದಾಖಲೆಗಳನ್ನು ತೋರಿಸಿ ಕೇಳಲಾಗಿ ವ್ಯತ್ಯಾಸ ಇರುವದು ಕಂಡು ಬರುತ್ತದೆಂದು ನುಡಿಯುತ್ತಾರೆ. ನಿಡಿ 26 ಒಟ್ಟು 3 ಎಕರೆ 5 ಗುಂಟೆಗೆ ಸಂಬಂದಿಸಿದ್ದು ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕ್ರಯ ಪತ್ರದಲ್ಲಿ ನಮೂದಿಸಿರುವ ಆಸ್ತಿಯಲ್ಲಿ ನನ್ನ ಹೆಂಡತಿಗೆ 14 ಗುಂಟೆ 8 ಆಣೆ ಬಂದಿದ್ದು ಅದರ ನಕಾಶೆಯು ಅದಾಗಿರುತ್ತದೆಂದು ನುಡಿಯುತ್ತಾರೆ. ನಾನು ಕ್ರಯ ಪತ್ರದ ಆಸ್ತಿಗೆ , 14 ಗುಂಟೆ 8 ಆಣೆಗೆ ಹಾಗೂ 5 ಪ್ಲಾಟಗೆ ಸಂಬಂದಿಸಿದಂತೆ ಸಾಕ್ಷಿ ನುಡಿಯಲು

ಬಂದಿರುತ್ತೇನೆ. ಸಾಕ್ಷಿ ಮುಂದುವರೆದು ಮತ್ತೊಂದು ಖರೀದಿ ಪತ್ರಕ್ಕೂ ಸಾಕ್ಷಿ ನುಡಿಯುತ್ತಿದ್ದೇನೆಂದು ನುಡಿಯುತ್ತಾರೆ. ಸರ್ವೆ ನಂಃ 627/1 ಈಗಲೂ ಸಹ ವ್ಯವಸಾಯದ ಜಮೀನು ಆಗಿರುತ್ತದೆಂದರೆ ಸಾಕ್ಷಿಯು ಎನ್ ಎ ಪ್ಲಾಟು ಆಗಿರುತ್ತದೆಂದು ನುಡಿಯುತ್ತಾರೆ. ಇ-ಖಾತಾ ಸ್ವತ್ತಿನಲ್ಲಿ ಭಾವಚಿತ್ರ ಇದ್ದು ಅದರಲ್ಲಿ ಎಲ್ಲಿಯೂ ಸಹ ರಸ್ತೆ , ಕಲ್ಲು ಕಂಡು ಬರುತ್ತಿಲ್ಲ ಎಂದರೆ ಸರಿ. ಎನ ಎ ಪ್ಲಾಟು ಆಗಿ ಪರಿವರ್ತನೆ ಗೊಂಡು ರೆಸಿಡೆನ್ಸಿಯಲ್ ಆದ ಬಗ್ಗೆ ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯು ಯಾವದು ಎಂದು ಸಾಕ್ಷಿಗೆ ಅವರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ದಾಖಲೆ ನೋಡಿ ನಿಡಿ 27 ಎಂದು ನುಡಿಯುತ್ತಾರೆ. ಸದರಿ ನಿಡಿ 27 ರ 2 ನೇ ಸಾಲಿನಲ್ಲಿ 14 ಗುಂಟೆ 8 ಆಣೆ ಮಾತ್ರ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆ ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿಯು ನನ್ನ ಹೆಂಡತಿಯ ಪಾಲಿಗೇ ಬಂದ ಆಸ್ತಿಯು ಮಾತ್ರ ಪರಿವರ್ತನೆ ಆದ ಬಗ್ಗೆ ಉಲ್ಲೇಖ ಇದ್ದು ಉಳಿದ ಆಸ್ತಿ ಬಗ್ಗೆ ನಿಡಿ 27 ರಲ್ಲಿ ಉಲ್ಲೇಖ ಇಲ್ಲ ಎಂದು ನುಡಿಯುತ್ತಾರೆ. ನನ್ನ ಹೆಂಡತಿಯು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಪಾಲು ವಿಭಾಗದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪಾಲು ಪತ್ರ ಆಗಿರುವದಿಲ್ಲ ಬದಲಿಗೆ ಮೌಖಿಕವಾಗಿ ಆಗಿದ್ದು ಮ್ಯುಟೇಶನಲ್ಲಿ ಪಾಲು ಆದ ಬಗ್ಗೆ ಉಲ್ಲೇಖ ಇದೆ ಎಂದು ನುಡಿಯುತ್ತಾರೆ. ನನ್ನ ಮತ್ತು ಜೈನರ ಹಕ್ಕ ಬದಲಾವಣೆ ವಹಿಯು ಒಂದೇ ಶೀಟನಲ್ಲಿ ಬೇರೆ ಬೇರೆಯಾಗಿ ಬಂದಿರುತ್ತದೆ. ನಾನು ಹಾಜರುಪಡಿಸಿರುವ ಕ್ರಯ ಪತ್ರಗಳಲ್ಲಿ ಜೈನರ ಹಿಸ್ಸೇ ಇರುವದಿಲ್ಲ ಎಂದರೆ ಸರಿ. ನಿಡಿ 31 ರ ಕೊನೆಯ ಸಾಲಿನಲ್ಲಿ ಕೆಲವೊಂದು ಅಕ್ಷರಗಳನ್ನು ಸೇರಿಸಲಾಗಿರುತ್ತದೆಂದರೆ ಸರಿಯಲ್ಲ. ತಾವು ಸದರಿ ಸಾಲುಗಳನ್ನು ಸಂಬಂದಪಟ್ಟ ಅದಿಕಾರಿಗಳಿಂದ ಸೇರಿಸಿ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ.

6. ನಾನು ಮೂಲ ಜಿಪಿಎ ಪತ್ರವನ್ನು ಓದಿ ಪರಿಶೀಲಿಸಿರುತ್ತೇನೆ. ನಾನು ಜಿಪಿಎ ದಾರರನ್ನು ಖರೀದಿ ಮಾತುಕತೆಗೆ ಪ್ರತಿವಾದಿ 1 ರಿಂದ 9 ರವರನ್ನು ಸೇರಿಸಿ ಎಂದು ಕೇಳಿದ್ದೆ. ಅವರ ಜೊತೆ ಆಯಿತಾ ಎಂದರೆ ಸಾಕ್ಷಿಯು 1 ರಿಂದ 9 ನೇ ಪ್ರತಿವಾದಿಯರು ಮಾತುಕತೆಗೆ ಬಂದಿರಲಿಲ್ಲ ಎನ್ನುತ್ತಾರೆ. ಮಾತುಕತೆಯು ಸಿ ವಿ ರಟ್ಟಿಹಳ್ಳಿ ವಕೀಲರ ಕಚೇರಿಯಲ್ಲಿ ಆಗಿರುತ್ತದೆ. ಜಿಪಿಎ ಪತ್ರದಲ್ಲಿ ಬೆನಕಟ್ಟಿ ರವರ ವಿಳಾಸವು ಉಣಕಲ್ಲ ಎಂದು ಇತ್ತು. ಈ ರೀತಿ ವಿಳಾಸ ಇದ್ದ ಕಡೆಗೆ ಹೋಗಿ ವಿಚಾರ ಮಾಡುವ ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸಿ ವಿ ರಟ್ಟಿಹಳ್ಳಿ

ವಕೀಲರ ಮೇಲೆ ನಂಬಿಕೆ ಮತ್ತು ವಿಶ್ವಾಸ ಇದ್ದು ಹಾಗೂ ಅವರು ವಿಶ್ವಾಸ ಬರುವ ರೀತಿ ಹೇಳಿದ ಕಾರಣ ವಿಚಾರ ಮಾಡಿಲ್ಲ ಎನ್ನುತ್ತಾರೆ. ನನಗೆ ಈ ವ್ಯವಹಾರ ಆಗುವ ಪ್ೂರ್ವದಲ್ಲಿ ಸಿ ವಿ ರಟ್ಟಿಹಳ್ಳಿ ವಕೀಲರವರ ಪರಿಚಯ  ಇರಲಿಲ್ಲ. ಯಾರು ಅವರ ಮೇಲೆ ವಿಶ್ವಾಸ ಇಡುವಂತೆ ಹೇಳಿದರು ಎಂದರೇ ಸಾಕ್ಷಿಯು ಅವರ ಜೊತೆ ಮಾತುಕತೆ ಮಾಡುತ್ತಿದ್ದಾಗ ವಿಶ್ವಾಸ ಬಂದಿದ್ದು ಅವರು ವಕೀಲರು ಎಂದು ಗೊತ್ತಾದಾಗ ಮತ್ತಷ್ಟು ದೃಡವಾಯಿತು ಎಂದು ನುಡಿಯುತ್ತಾರೆ.

7.  ಮತ್ತೊಂದು ಕ್ರಯ ಪತ್ರದಲ್ಲಿನ  (ಅಂದರೆ ನಿಡಿ 42) ರೂ.3,50,000/- ಗಳಿಗೂ ಖರೀದಿ ಸಂಚಗಾರ ಪತ್ರ ಆಗಿರಲಿಲ್ಲ ಬದಲಿಗೆ ಮೌಖಿಕ ಕರಾರು ಆಗಿತ್ತು. ತಮ್ಮ ಹೆಚ್ಚುವರಿ ಕೈಪಿಯತ್ತನಲ್ಲಿ 1,75000/- ಮತ್ತು 3,50,000/- ಗಳನ್ನು ಮೌಖಿಕ ಕರಾರಿನ ಮೇಲೆ ನೀಡಲಾಗಿರುತ್ತದೆಂದು ತಿಳಿಸಿಲ್ಲ ಎಂದರೆ ಸರಿ. ಪಿಟಿ ಶೀಟನಲ್ಲಿರುವ ವಿಸ್ತೀರ್ಣಕ್ಕೂ ನಿಡಿ 26 ರಲ್ಲಿರುವ ವಿಸ್ತೀರ್ಣಕ್ಕೂ ವ್ಯತ್ಯಾಸಾ ಇರುತ್ತದೆಂದರೆ ಸಾಕ್ಷಿಯು ದಾಖಲೆ ನೋಡಿ ಹೇಳಬೇಕು ಎನ್ನುತ್ತಾರೆ.

(ಈ ಸಂದರ್ಭದಲ್ಲಿ 2 ರಿಂದ 5ನೇ ಪ್ರತಿವಾದಿಯರ ಪರ ವಕೀಲರು ಕೆಲವೊಂದು ದಾಖಲೆಗಳ ಮೇಲೆ ಹೆಚ್ಚವಾರಿ ಪಾಟೀ ಸವಾಲು ಮಾಡಬೇಕಾಗಿರುವ ಕಾರಣ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.